ಗೋಗರೆಯುತ್ತಾಳೆ. ಸರಿ, ಪೂಜೆ ಶುರುವಾಗುತ್ತದೆ. ಹೋಮಹವನಗಳೆಲ್ಲಾ ಸಾಂಗವಾಗಿ ಮುಗಿದು ಮನೆಯೆಲ್ಲ ಹೊಗೆಯಿಂದ ತುಂಬಿಹೋಗುತ್ತದೆ. ಎಲ್ಲಾ ಮುಗಿಸಿದವನು ತೀರ ಹೊರಡುವಾಗ, ದೇವರ ಮುಂದಿರೋ ವಸ್ತುಗಳನ್ನು ಈಗ್ಲೇ ಮುಟ್‌ಬ್ಯಾಡಾ ಕಣವ್ವಾ... ಆ ತಾಯಿ ಕೃಪಾದೃಷ್ಟಿ ಸಂಪೂರ್ಣವಾಗಿ ಬೀಳಲಿ... ನಿಧಾನವಾಗಿ ಎಲ್ಲವನ್ನೂ ಒಳಗಿಟ್ಟುಕೊಳ್ಳಿ, ನಾನಿನ್ನು ಬತ್ತೀನಿ ಅನ್ನುತ್ತಾ ಮೆಲ್ಲಗೆ ಜಾಗ ಖಾಲಿಮಾಡುತ್ತಾನೆ.

ನಂತರದ್ದು ಯಾರಿಗಾದರೂ ಗೊತ್ತಿರುವಂಥದ್ದೇ. ಬಟ್ಟೆಯ ಗಂಟು ಬಿಚ್ಚಿ ನೋಡಿದ ಆಕೆ ಎದೆ ಬಡಿದುಕೊಂಡು ಗಂಡನ ಜೊತೆ ಠಾಣೆಗೆ ಓಡಿಬರುತ್ತಾಳೆ, ಕಂಪ್ಲೇಂಟು ನೀಡಲು... ಯಥಾ ಪ್ರಕಾರ ಹದ್ದು ಇಲಿ ಕಚ್ಚಿಕೊಂಡು ಹಾರಿ ಹೋಗಿರುತ್ತದೆ !

ಹೀಗೆ ಮಾಡುವವರಿದ್ದಾರೆ ಅಂತಲೇ ಪೊಲೀಸರು ಬೀದಿ ಬೀದಿಗಳನ್ನು ಸುತ್ತುತ್ತಾರೆ. ಪಾರ್ಕು, ಸ್ಕೂಲು, ಕಾಲೇಜುಗಳ ಬಳಿ ಎಚ್ಚರಿಕೆ ಬ್ಯಾನರುಗಳನ್ನು ಕಟ್ಟುತ್ತಾರೆ. ಬ್ಯಾಂಕುಗಳ ಬಳಿ ಕಾವಲು ಕಾಯುತ್ತಾರೆ. ಮ್ಯಾನೇಜರುಗಳನ್ನು ಹಿಡಿದು 'ವಂಚಕರಿದ್ದಾರೆ ಎಚ್ಚರಿಕೆ', 'ಗ್ರಾಹಕರೇ ಮೋಸಹೋಗಬೇಡಿ' ಅನ್ನುವ ಫಲಕಗಳನ್ನು ತೂಗುಹಾಕಿಸುತ್ತಾರೆ. ಎಲ್ಲರೂ ಬರುತ್ತಾರೆ, ಫಲಕಗಳನ್ನು ಓದಿಯೂ ಓದುತ್ತಾರೆ. ಆದರೂ 'ಆಟಗಾರರು' ಸುಮ್ಮನಿರಲಾರರು. ಹೇಗಾದರೂ ಮಾಡಿ ಅಖಾಡಕ್ಕೆ ಇಳಿದೇ ಇಳಿಯುತ್ತಾರೆ. ಆಟವಾಡುವುದು ಅವರಿಗೆ ಅಷ್ಟು ಮೆಚ್ಚು. ಮೇಲಾಗಿ ಹೊಟ್ಟೆಪಾಡಿನ ವಿಷಯ. ಅವರ ಪಾಲಿಗೆ ಗ್ರಾಹಕರೇ ದೇವರು! ಅವರೊಡನೆ ಒಡನಾಡುವ ಅವಕಾಶವನ್ನು ಅವರು ತಪ್ಪಿಸಿಕೊಳ್ಳಲಿಚ್ಛಿಸುವುದಿಲ್ಲ.

ಈ ತರಹದ ಕುಶಲಕರ್ಮಿಗಳ ಹಿನ್ನೆಲೆ ಏನಿರಬಹುದೆಂದು ಕೆಲ ಅಧಿಕಾರಿಗಳು ತಲೆ ಕಡಿಸಿಕೊಂಡಿದ್ದುಂಟು. ಮತ್ತೆ ಕೆಲವರು ಅವರ ಬೆನ್ನು ಬಿದ್ದು ಊರೂರುಗಳನ್ನೆಲ್ಲಾ ತಿರುಗಿದ್ದಾರೆ. ಆಸಕ್ತಿಕರ ವಿಷಯವೇನೆಂದರೆ ಅವರಾರೂ ಇಲ್ಲಿಯವರಲ್ಲ. ಅಂದರೆ ನಮ್ಮ ರಾಜ್ಯದವರೇ ಅಲ್ಲ. ಎಲ್ಲರೂ ನೆರೆ ರಾಜ್ಯಗಳ ಓಜಿಕೊಪ್ಪಂ, ಸ್ಟೂವರ್ಟುಪುರಂಗಳಂತ ಗ್ರಾಮಗಳಿಂದ ಬರುವವರು. ಇನ್ನೂ ಆಸಕ್ತಿಕರ ಅಂದರೆ ಅಲ್ಲಿರುವ ಪ್ರತಿಯೊಂದು ಮನೆಯೂ ಇವರದ್ದೇ, ಅವರಿಗೆ ಬೇರೆ ಕಸುಬೇ ಗೊತ್ತಿಲ್ಲ, ಕಳ್ಳತನ, ವಂಚನೆ ಮಾಡುವುದೇ ಅವರ ಫುಲ್‌ಟೈಂ 'ಕಾಯಕವೇ ಕೈಲಾಸ'!

ಇಲ್ಲಿನ ಪ್ರತಿ ಗ್ರಾಮಗಳಲ್ಲೂ ದೇವಸ್ಥಾನಗಳಿವೆ. ಪ್ರತಿಯೊಬ್ಬನೂ ದೈವಭಕ್ತನೇ. ಅಸೈನ್‌ಮೆಂಟಿನ ಮೇಲೆ ಯಾವುದಾದರೂ ನಗರಗಳಿಗೆ ಹೊರಡಬೇಕಾದಾಗ ಎಲ್ಲರೂ ತಮ್ಮ ದೈವಗಳಿಗೆ ವಿಶೇಷ ಪೂಜೆ ಪುರಸ್ಕಾರಗಳನ್ನು ಮಾಡಿಕೊಂಡು ಹೊರಡುತ್ತಾರೆ. ನಂಬಿದ ದೇವರು ತಮ್ಮ ಕೈಬಿಡುವುದಿಲ್ಲ ಅನ್ನುವ ಗಾಢ ನಂಬಿಕೆ ಇವರದ್ದು. ಅದಕ್ಕೆ ತಕ್ಕಂತೆ ಪರೀಕ್ಷೆಗಳಲ್ಲಿ ನೂರಕ್ಕೆ ತೊಂಬತ್ತು ಅಂಕ! ಗೆದ್ದ (ಕದ್ದ) ಹಣದೊಂದಿಗೆ ಮತ್ತೆ ತಮ್ಮ ಊರಿಗೆ ಮರಳುವ ಇವರು ಅದೇ ಹಣದಲ್ಲಿ ದೇವರಿಗೆ ಕೈತುಂಬಾ ಕಾಣಿಕೆ ಕೊಡುತ್ತಾರೆ. ಹುಂಡಿ ತುಂಬಿಸುತ್ತಾರೆ. ಇಂಥಾ ನಿಯತ್ತಿನ ಭಕ್ತರನ್ನ ಆ ದೇವರಾದ್ರೂ ಯಾಕೆ ಸುಮ್ಮುಸ್ಮನೆ ಕಳೆದುಕೊಳ್ತಾನೆ ಅನ್ನಿಸಿಬಿಡುತ್ತದೆ. ಉಳಿದ ದುಡ್ಡಿನಲ್ಲಿ ಗ್ರಾಮದ ಹಣ್ಣು ಹಣ್ಣು ಮುದುಕರಿಗೆ ವೈದ್ಯ, ಔಷಧ ಅಂತ ಖರ್ಚು ಮಾಡುತ್ತಾರೆ. ಹೆಂಡತಿ ಮಕ್ಕಳ ಖರ್ಚಿಗೆ ಕೊಡುತ್ತಾರೆ. ವಿಶ್ರಾಂತಿ ಕೆಲವೇ ದಿನಗಳಷ್ಟೆ... ಮತ್ತೊಂದು ಮಹಾನಗರ ಅವರನ್ನು ಕೈಬೀಸಿ ಕರೆಯುತ್ತದೆ.

ನೀವು ನಂಬುವುದಿಲ್ಲ. ತಾವು ಮಿಕಗಳನ್ನು ಏಮಾರಿಸಲು ಉಪಯೋಗಿಸುವ ನೋಟುಗಳನ್ನು ಸಹ ಕೆಲವರು ದೇವರ ಮುಂದಿಟ್ಟು ಪೂಜೆ ಮಾಡಿಸುತ್ತಾರೆ. ಅವೇ ನೋಟುಗಳನ್ನು ಬಳಸಿದರೆ